ದಿಃ 09.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಬಿ.ಜೆ, ವಕೀಲರಿಂದ ಅರ್ಜಿದಾರರ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

**ಪಾಟೀ ಸವಾಲು ಶ್ರೀ ಎಂ.ವೈ.ಎಸ್ ವಕೀಲರು ಶ್ರೀ ಬಿ.ಎಸ್.ಎಲ್, ವಕೀಲರ ಪರವಾಗಿ 2 ನೇ ಎದುರುದಾರರಿಗೆ**

2. ಮೃತ ಮಂಣಿಕಂಠನ್ ರವರ ಸ್ವಂತ ಊರು ತಮಿಳುನಾಡಿನ ಕಲ್ಲಕುರುಚಿ ಜಿಲ್ಲೆಯ ವೆಲ್ಲಿಮಲ್ಯೆ ತಾಲೂಕಿನ ಕೊಟ್ಟಾವಳು ಗ್ರಾಮದ ವಾಸಿಯಾಗಿರುತ್ತಾರೆ. ನಾನು ಮೃತಮಣಿಕಂಠನ್ ರವರ ಪಕ್ಕದ ಊರಿನ ನಿವಾಸಿಯಾಗಿರುತ್ತೇನೆ. ನಾನು ಮತ್ತು ಮೃತ ಮಂಣಿಕಂಠನ್ ರವರು ಜೊತೆಗೆ ಕೆಲಸ ಮಾಡಿರುವ ಬಗ್ಗೆ ದಾಖಲಾತಿ ಇರುತ್ತದೆ. ಆ ಬಳಿ ಹಾಜರಾತಿ ಪುಸ್ತಕ ನನ್ನ ಬಳಿ ಇದೆ. ಹಾಜರಾತಿ ಪುಸ್ತಕವು 1 ನೇ ಪ್ರತಿವಾದಿಯ ಬಳಿ ಇರುತ್ತದೆ. ಈ ಪ್ರಕರಣದಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ಮೃತ ಮಂಣಿಕಂಠನ್ ರವರು ಕೆಲಸ ಮಾಡುತ್ತಿದ್ದ ಸ್ಥಳದಿಂದ 20 ಅಡಿ ದೂರದಲ್ಲಿ ಮರಗಸಿ ಕೆಲಸ ಮಾಡುತ್ತಿದ್ದೆನು. ನಾನು ಮತ್ತು ತೋಟದ ರೈಟರ್ ಹಾಗೂ ಮೃತ ಮಂಣಿಕಂಠನ್ ರವರ ಅಣ್ಣ ಅಶೋಕ ರವರು ಮಂಣಿಕಂಠನ್ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. 1 ನೇ ಎದುರುದಾರರ ತೋಟದಲ್ಲಿ ಗಜೇಂದ್ರ ಎನ್ನುವವರು ರೈಟರ್ ಆಗಿ ಕೆಲಸ ಮಾಡುತ್ತಿದ್ದರು. ಮೃತ ಮಂಣಿಕಂಠನ್ ರವರು ವಯಸ್ಸಿನಲ್ಲಿ ನನಗಿಂತ ಚಿಕ್ಕವರು ಆಗಿರುತ್ತಾರೆ. ನನಗೆ 1 ನೇ ಎದುರುದಾರರು ದಿನಕ್ಕೆ ರೂ.900-00 ಸಂಬಳ ನೀಡುತ್ತಿದ್ದರು. ಮೃತ ಮಂಣಿಕಂಠನ್ ರವರು ನನ್ನ ಊರಿನವರು ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ

ಮಂಣಿಕಂಠನ್ ರವರ ಅಂತ್ಯ ಕ್ರಿಯೆಗೆ 1 ಲಕ್ಷ ರೂಪಾಯಿ ಖರ್ಚು ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಮಂಣಿಕಂಠನ್ ರವರಿಗೆ ದಿನಕ್ಕೆ ರೂ.900-00 ಸಂಬಳ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಮಂಣಿಕಂಠನ್ ರವರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಹೆಚ್ಚಿನ ಪರಿಹಾರವನ್ನು ಪಡೆಯುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಡಿ.ಕೆ.ಪಿ., ವಕೀಲರಿಂದ 1 ನೇ ಎದುರುದಾರರ ಪರವಾಗಿ**

3. ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ